ಅಧ್ಯಕ್ಷರು :— ಶಿರಾ ಘಟನೆಯಲ್ಲಿ ಮೃತಪಟ್ಟವರಿಗೆ ಪರಿಹಾರ ಕೊಟ್ಟಿಲ್ಲವೆಂದು ಮಾನ್ಯ ಅರಗ ಜ್ಞಾನೇಂದ್ರರವರು ಪ್ರಶ್ನಿಸಿದ್ದಾರೆ. ಇದಕ್ಕೆ ಸರ್ಕಾರದವರು ಉತ್ತರ ಕೊಡಬೇಕು.

ಶ್ರೀ ಅರಗ ಜ್ಞಾನೇಂದ್ರ :— ಮಾನ್ಯ ಅಧ್ಯಕ್ಷರೆ, ನಾನು ಮಾತನಾಡುವುದಕ್ಕೆ ಸ್ವಲ್ಪ ಅವಕಾಶ ಕೊಡಬೇಕು.

ಅಧ್ಯಕ್ಷರು :— ಪ್ರಸ್ತಾಪ ಮಾಡಿ.

ಓ) ಶಿರಾದಲ್ಲಿ ಉಂಟಾದ ಗಲಭೆಯಲ್ಲಿ ಮೃತಪಟ್ಟ ಕುಟುಂಬಕ್ಕೆ ಪರಿಹಾರ.

+ಶ್ರೀ ಅರಗ ಜ್ಞಾನೇಂದ್ರ (ತೀರ್ಥಹಳ್ಳಿ) :— ಮಾನ್ಯ ಅಧ್ಯಕ್ಷರೆ, ಇತ್ತೀಚೆಗೆ ಶಿರಾ ಪಟ್ಟಣದಲ್ಲಿ ಶೇಂಗ ಬೆಲೆಯ ವ್ಯತ್ಯಾಸದಿಂದ ಬಹಳ ದೊಡ್ಡ ಗಲಾಟೆ ನಡೆಯಿತು. ಇದರಲ್ಲಿ ಐದು ಜನ ರೈತರು ಮತ್ತು ಸಾಯಿಪ್ರಕಾಶ್ ಎನ್ನತಕ್ಕಂಥ ಎಸ್.ಐ. ಕೂಡ ಕೊಲೆಯಾದರು. ಶ್ರೀಯುತರು ಕೊಲೆಯಾದ ನಂತರ ಅವರ ಕುಟುಂಬ ವರ್ಗದವರಿಗೆ ಇಷ್ಟು ಹಣವನ್ನು ಕೊಡುತ್ತೇವೆಂದು ಸರ್ಕಾರ ಘೋಷಣೆ ಮಾಡಿತ್ತು. ಮೃತರಾದ ಸಾಯಿಪ್ರಕಾಶ್ ವ್ಯಕ್ತಿತ್ವದ ಬಗ್ಗೆ ಅಪಾರವಾದ ಗೌರವವನ್ನು ಅಲ್ಲಿರತಕ್ಕಂಥ ಎಲ್ಲಾ ರೈತರು ವ್ಯಕ್ತಪಡಿಸಿದ್ದನ್ನು ನಾನು ಸಮಿತಿ ಜೊತೆಯಲ್ಲಿ ಹೋದಾಗ ನನಗೆ ಕಾಣಿಸಿತು. ಒಬ್ಬ ಗೌರವಾನ್ವಿತ ವ್ಯಕ್ತಿ ತನ್ನ ಜೀವನದ ಹಂಗನ್ನು ತೊರೆದು ಹೋರಾಟ ಮಾಡಿ ಅಲ್ಲಿನ ಜನರಿಗೆ ಶಾಂತಿಯನ್ನು ಕೊಡುವ ದೃಷ್ಟಿಯಿಂದ ವಿಶೇಷವಾದ ಪ್ರಯತ್ನವನ್ನು ಈ ಅಧಿಕಾರಿ ಅಲ್ಲಿ ಮಾಡಿದ್ದಾರೆ. ಇವರು ಸತ್ತ ನಂತರ, ಮಾನ್ಯ ಗೃಹ ಸಚಿವರಾಗಲಿ ಅಥವಾ ಉನ್ನತ ದರ್ಜೆಯ ಪೊಲೀಸ್ ಅಧಿಕಾರಿಗಳು ಮೃತರ ಮನೆಗೆ ಹೋಗಿ ಸಾಂತ್ವಾನ ಹೇಳಿ ಒಂದಿಷ್ಟು ಪರಿಹಾರ ಹಣವನ್ನು ಸರ್ಕಾರದ ಕಡೆಯಿಂದ ಕೊಡಬೇಕಾದ ಕೆಲಸವನ್ನು ಮಾಡಬೇಕಾಗಿತ್ತು. ನಾನು ಮೊನ್ನೆ ಅವರ ಕುಟುಂಬದವರನ್ನು ಭೇಟಿ ಮಾಡಿದೆ, ಇವರ ಕುಟುಂಬದಲ್ಲಿ ಅವರ ಪತ್ನಿ ಮತ್ತಿ ಚಿಕ್ಕ ಮಕ್ಕಳು ಇದ್ದಾರೆ. ನಮಗೆ ಯಾವುದೇ ರೀತಿಯ ಪರಿಹಾರವನ್ನು ಕೊಟ್ಟಿಲ್ಲವೆಂದು ತಿಳಿಸಿದರು.

ಅಧ್ಯಕ್ಷರು :— ನಾನು ನಿಮ್ಮಲ್ಲಿ ವಿನಂತಿ ಮಾಡಿಕೊಳ್ಳುವುದೇನೆಂದರೆ, ಈಗಾಗಲೇ ನಾಲ್ಕೂವರೆ ವರ್ಷಗಳು ಕಳೆದು ಹೋಗಿದೆ. ಅದರು ನೀವು ಯಾವತ್ತು ಪಾರ್ಲಿಮೆಂಟರಿ ವ್ಯವಹಾರಗಳನ್ನು ಕಲಿತುಕೊಳ್ಳುವುದು? ಗಲಭೆಯಲ್ಲಿ ಸತ್ತು ಹೋದ ಸಬ್-ಇನ್‌ಸ್ಪೆಕ್ಟರ್, ಇನ್‌ಸ್ಪೆಕ್ಟರ್ ಕುಟುಂಬಕ್ಕೆ ಇನ್ನು ಪರಿಹಾರ ಸಿಕ್ಕಿಲ್ಲ ಎಂದು ಒಂದೇ ವಾಕ್ಯದಲ್ಲಿ ಹೇಳುವುದನ್ನು ಬಿಟ್ಟು, ನಮ್ಮ ಪಾಂಡಿತ್ಯದ ಎಲ್ಲಾ ಪ್ರದರ್ಶನ ಆಗಬೇಕಾದರೆ ನನಗೆ ತಾಳ್ಮೆ ಎಲ್ಲಿಂದ ಬರಬೇಕು? ಸಮಯವನ್ನು ನಾನು ಉತ್ಪಾದನೆ ಮಾಡುವುದಕ್ಕೆ ಆಗುತ್ತದೆಯೇ?

ಶ್ರೀ ಅರಗಜ್ಞಾನೇಂದ್ರ :— ನಾನು ಎದ್ದು ನಿಂತಾಗ ತಾವು ಈ ರೀತಿ ಹೇಳಿದರೆ ಹೇಗೆ?

ಅಧ್ಯಕ್ಷರು :— ಪುಂಖಾನುಪುಂಖವಾಗಿ ಎಲ್ಲವನ್ನೂ ವ್ಯಾಖ್ಯಾನಿಸಿಕೊಂಡು ಮುಂದುವರಿಸುತ್ತಾ ಹೋಗಬಹುದು. ನನ್ನದೇನೂ ಆಕ್ಷೇಪಣೆ ಇಲ್ಲ.

ಶ್ರೀ ಆರಗಜ್ಞಾನೇಂದ್ರ :— ನಾನು ಅಪರೂಪವಾಗಿ ಒಂದು ಸಲ ಮಾತನಾಡುತ್ತೇನೆ. ನಿಮ್ಮ ನಮ್ಮ ರಕ್ಷಣೆಗೆ ಬರಬೇಕು.

ಅಧ್ಯಕ್ಷರು :— ಇದು ರಕ್ಷಣೆಯ ಪ್ರಶ್ನೆ ಅಲ್ಲ. ವಿಧಾನಸಭೆಯಲ್ಲಿ ಮಾತನಾಡತಕ್ಕಂಥದ್ದು ಒಂದು ಕಲೆ, ಇದನ್ನು ನೋಡಿ ಕಲಿತುಕೊಳ್ಳುತ್ತಾ ಹೋಗಬೇಕು. ಯಾವುದೇ ಒಂದು ವಿಷಯವನ್ನು ಸಂಕ್ಷಿಪ್ತವಾಗಿ ಮತ್ತು ಪರಿಣಾಮಕಾರಿಯಾಗಿ ಹೇಳಬೇಕು.

ಶ್ರೀ ಆರಗಜ್ಞಾನೇಂದ್ರ :— ಮೃತರ ಕುಟುಂಬವರ್ಗದವರಿಗೆ ಇದುವರೆಗೂ ಯಾವುದೇ ರೀತಿಯ ಪರಿಹಾರ ಹಣವನ್ನು ಕೊಟ್ಟಿಲ್ಲ ಮತ್ತು ಅವರ ಕುಟುಂಬ ವರ್ಗದವರಿಗೆ ಸಾಂತ್ವನ ಮಾಡುವ ವ್ಯವಸ್ಥೆ ಸರ್ಕಾರದ ಕಡೆಯಿಂದ ಆಗಿಲ್ಲ. ಇದನ್ನು ಯಾವಾಗ ಮಾಡುತ್ತೀರಿ? ಮತ್ತು ಡಿಲೇ ಆಗಿರುವುದಕ್ಕೆ ಕಾರಣ ಏನೆಂದು ದಯವಿಟ್ಟು ಹೇಳಬೇಕು.

ಶ್ರೀ ಪಿ.ಜಿ.ಆರ್. ಸಿಂಧ್ಯ :— ಮೃತರ ಕುಟುಂಬಕ್ಕೆ ಸಾಂತ್ವನ ಹೇಳತಕ್ಕಂಥ ಕೆಲಸ ಸರ್ಕಾರ ಮಾಡಿದೆ. ಹಾಗೂ ಮೃತರ ಕುಟುಂಬವರ್ಗದವರ ಮೇಲೆ ಸರ್ಕಾರಕ್ಕೆ ಅನುಕಂಪ ಇದೆ. ಸ್ವತಃ ಮಾನ್ಯ ಮುಖ್ಯಮಂತ್ರಿಗಳು ಈಗಾಗಲೇ ನಿರ್ದೇಶನ ಮತ್ತು ಆಜ್ಞೆಯನ್ನು ಸಹ ಮಾಡಿದ್ದಾರೆ. ಮೃತರ ಕುಟುಂಬಕ್ಕೆ ಎಷ್ಟು ಪರಿಹಾರ ಕೊಡಬೇಕೆಂಬ ಒಂದು ವಿಶೇಷ ಪ್ರಸ್ತಾವನೆಯನ್ನು ನಾಳೆ ನಡೆಯತಕ್ಕಂಥ ಸಚಿವ ಸಂಪುಟದ ಮುಂದೆ ತರುತ್ತೇನೆ. ಅವರಿಗೆ ಪೆನ್‌ಷೆನ್ ಯಾವ ರೀತಿ ಮಾಡಬೇಕು ಎಷ್ಟರ ಮಟ್ಟಿಗೆ ಕೊಡಬೇಕು ಎಂಬುದರ ಬಗ್ಗೆ ಸರ್ಕಾರದ ಮುಂದೆ ಪರಿಶೀಲನೆ ಮಾಡಿದ್ದೇವೆ. ಇದು ಸಚಿವ ಸಂಪುಟದ ಮುಂದೆ ಬರಬೇಕು. ಏಕೆಂದರೆ, ಇದು ನಾರ್ಮಲ್ ಕೋರ್ಸ್‌ಸ್ ಆಗಿರತಕ್ಕಂಥದ್ದಲ್ಲ, ಒಂದು ವಿಶೇಷವಾದ ಘಟನೆಯಾಗಿರುವುದರಿಂದ ಇದರ ಬಗ್ಗೆ ಆರ್ಥಿಕ ಇಲಾಖೆಯ ಒಪ್ಪಿಗೆ ತೆಗೆದುಕೊಂಡು ಸಚಿವ ಸಂಪುಟದ ಮುಂದೆ ತರುತ್ತೇವೆ. ಬಹುಶಃ ಇನ್ನು ಎರಡು ವಾರದೊಳಗೆ ಅಥವಾ 15 ದಿವಸಗೊಳಗಾಗಿ ಮೃತರ ಕುಟುಂಬಕ್ಕೆ ಪರಿಹಾರ ಮತ್ತು ಪೆನ್‌ಷನ್ ಕೊಡುವ ಬಗ್ಗೆ ಸರ್ಕಾರ ಕ್ರಮ ತೆಗೆದುಕೊಳ್ಳುತ್ತದೆ. ಎರಡನೇಯದಾಗಿ ಸ್ವತಃ ಡಿಜಿ.ಪಿ. ಮತ್ತು ಐ.ಜಿ.ಪಿ.ರವರು ಮೃತರ ಪತ್ನಿಯನ್ನು ಮತ್ತು ಕುಟುಂಬ ವರ್ಗದವರಲ್ಲಿ ಇತರರನ್ನು ಕರೆಸಿ ಸರ್ಕಾರದಿಂದ ತಕ್ಷಣ ಕೆಲಸ ಕೊಡುವುದಕ್ಕೆ ನಾವು ತಯಾರಿದ್ದೇವೆ. ನೀವು ತೆಗೆದುಕೊಳ್ಳುವುದಕ್ಕೆ ತಯಾರಿದ್ದೀರಾ ಎಂಬುದನ್ನು ಈಗಾಗಲೇ ತಿಳಿಸಿದ್ದಾರೆ. ಅವರ ಕುಟುಂಬವರ್ಗದವರು ಈಗ ಬಂದರೆ ತುರ್ತಾಗಿ ಕೆಲಸ ಕೊಡುವುದಕ್ಕೆ ನಾವು ತಯಾರಿದ್ದೇವೆ.